IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಶ್ರೀವೈಷ್ಣವ ಪರಂಪರೆಯಲ್ಲಿ ಮಹಿಳಾ ಅಸ್ತಿತ್ವದ ಸ್ವರೂಪ.

**Dr. Suneetha BV**

**ಸಾರಲೇಖ:**

ವೈದಿಕ ಪರಂಪರೆಯಲ್ಲಿ ಮಹಿಳೆಯರು ಭಾಗವತ ಸಂಪ್ರದಾಯದ ಪ್ರಧಾನ ಧೋರಣೆಯಲ್ಲಿ ಕೀರ್ತನೆಗಳು ಹಾಗೂ ಕಾವ್ಯಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಬಗೆಯ 'ಹದಿಬದೆಯ ಧರ್ಮ' ಕೃತಿ ಕೊಟ್ಟ ಸಂಚಿ ಹೊನ್ನಮ್ಮನಿಗೆ ಈ ಪರಂಪರೆಯಲ್ಲಿ ಪ್ರಮುಖ ಸ್ಥಾನವಿದೆ. ೧೯ನೇ ಶತಮಾದವರೆಗೂ ಮುಂದುವರೆದ ಈ ಕಾಲಘಟ್ಟದಲ್ಲಿ ಬರುವ ಹೆಳವನಕಟ್ಟೆ ಗಿರಿಯಮ್ಮ, ಗಲಗಲಿಯ ಅವ್ವ, ಭಾಗ್ಯಮ್ಮ, ಸುಂದರಬಾಯಿ, ಹರಪನಹಳ್ಳಿ ಭೀಮವ್ವ, ಶೃಂಗಾರಮ್ಮ, ರಾಣಿ ಚೆಲುವಾಂಬೆ, ಚೆಲ್ಲಮ್ಮ, ಸುಂದರಾಬಾಯಿ, ಪನ್ನಿ ಲಕ್ಷ್ಮೀ ಬಾಯಿ ನಾಡಘರ ಶಾಂತಿಬಾಯಿ, ಓರಬಾಯಿ ಲಕ್ಷ್ಮಿದೇವಮ್ಮ, ಅಂಬಾಬಾಯಿ, ರಾಧಾಬಾಯಿ, ಸರಸಾಬಾಯಿ, ಕಳಸದ ಸುಂದರಮ್ಮ, ಗುಂಡಮ್ಮ, ಜೀವೂಬಾಯಿ ಮೊದಲಾದವರು ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಘಟನೆಗಳನ್ನೊಳಗೊಂಡ ಪುಟ್ಟ ಕಾವ್ಯ ಕಥನಗಳನ್ನು ರಚಿಸಿದ್ದಾರೆ. ಕೀರ್ತನೆಗಳಲ್ಲಿ ಹರಿದಾಸರ ಲೋಕಾನುಭವದ ಪ್ರಭಾವದಂತೆ ಯತಾವತ್ತಾಗಿ ಮಹಿಳಾ ರಚನೆಗಳಲ್ಲೂ ಶಾಸ್ತ್ರ ಸಂಪ್ರದಾಯ, ಆಚಾರವಿಚಾರಗಳು ಜೀವಂತವಾಗಿ ಕಂಡುಬಂದಿವೆ. ಇವರ ಸಾಹಿತ್ಯದ ಮುಖ್ಯ ಲಕ್ಷಣಗಳಲ್ಲಿ ಹೆಣ್ಣು ಮಕ್ಕಳು ಆಚರಿಸುವ ವ್ರತ ಪೂಜೆಗಳು, ಹಬ್ಬ, ಹುಣ್ಣಿಮೆ, ಮದುವೆ, ಅಡುಗೆ ವಿಚಾರಗಳು, ಒಡವೆ ವಸ್ತ್ರಗಳು ಬದುಕಿನ ರೀತಿ–ನೀತಿಗಳು ಇವರ ವಿವೇಚನೆಯಲ್ಲಿ ಹಾಡಲು ಸುಲಭವಾದ ಶೈಲಿಯಲ್ಲಿ ಕೀರ್ತನೆ, ಹಾಡು ಹಾಗೂ ಕಾವ್ಯದ ವರ್ಣನೆಗಳಲ್ಲಿ ಜೀವನಾನುಭವದ ಮೌಲ್ಯಗಳಾಗಿ ಪರಂಪರೆಯ ಸಾಂಸ್ಕೃತಿಕ ನಿದರ್ಶನಗಳಂತೆ ದಾಖಲಾಗಿವೆ.

**ಪ್ರಮುಖ ಪದಗಳು:**

ಕೀರ್ತನೆಗಳು, ಮಹಿಳೆ, ಹರಿದಾಸರು, ಭಾಗವತ, ವೈದಿಕ, ಧರ್ಮಶಾಸ್ತ್ರ, ಸಂಪ್ರದಾಯ

**ಪೀಠಿಕೆ:**

ನಾಲ್ಕು ಗೋಡೆಗಳ ಪ್ರಪಂಚದಲ್ಲಿ ಬಂಧಿಯಾದ ಮಹಿಳೆ ಹೊರಬರುವ ಅವಕಾಶ ಸಿಕ್ಕಂತಾಗಿದೆ. ಈ ಅವಧಿಯಲ್ಲಿ ಮಹಿಳೆಗೆ ಅಲ್ಪ–ಸ್ವಲ್ಪ ಅವಕಾಶಗಳು ಲಭಿಸಿದರೂ ಅವರ ಸಮಗ್ರ ಜೀವನದಲ್ಲಿ ಸಾಮಾಜಿಕ ಸುಧಾರಣೆ ಕಾಣಲಿಲ್ಲ. ಭಕ್ತಿ, ನೀತಿ, ಶುದ್ಧ ಜೀವನ ಮೌಲ್ಯಗಳನ್ನು ಕುರಿತು ಸಮಾಜಕ್ಕೆ ತಮ್ಮ ಕೀರ್ತನೆಗಳ ಮೂಲಕ ಹೇಳ ಹೊರಟ ಹರಿದಾಸರು ಶುದ್ಧ ವೈದಿಕ ಪರಂಪರೆಯ ತತ್ವ ನೀತಿಗಳನ್ನೇ ಭಕ್ತಿನೆಲೆಯಲ್ಲಿ ಮರುಸೃಷ್ಟಿಸಿ ಸರಳವಾಗಿ ಮರುಬೋಧಿಸಿದರು.

೧೪ನೇ ಶತಮಾನದಲ್ಲಿ ಪ್ರಧಾನವಾಗಿ ಪ್ರಾರಂಭಗೊಂಡ ಶ್ರೀವೈಷ್ಣವ ಪಂಥ ತನ್ನ ಪ್ರಭಾವ ದೀರ್ಘ ಕಾಲದವರೆಗೂ ವಿಸ್ತರಿಸಿಕೊಂಡಿತು. ಭಜನೆ, ಹರಿಕಥೆ, ಕೀರ್ತನೆ ಮುಂತಾದ ಧಾರ್ಮಿಕ ಚಟುವಟಿಕೆಗಳಲ್ಲಿ ಮಹಿಳೆಯರು ಪಾಲ್ಗೊಳ್ಳುವ ಅವಕಾಶ ಕೊಟ್ಟಿದೆ. ನಾಲ್ಕು ಗೋಡೆಗಳ ಪ್ರಪಂಚದಲ್ಲಿ ಬಂಧಿಯಾದ ಮಹಿಳೆ ಹೊರಬರುವ ಅವಕಾಶ ಸಿಕ್ಕಂತಾಗಿದೆ. ಈ ಅವಧಿಯಲ್ಲಿ ಮಹಿಳೆಗೆ ಅಲ್ಪ–ಸ್ವಲ್ಪ ಅವಕಾಶಗಳು ಲಭಿಸಿದರೂ ಅವರ ಸಮಗ್ರ ಜೀವನದಲ್ಲಿ ಸಾಮಾಜಿಕ ಸುಧಾರಣೆ ಕಾಣಲಿಲ್ಲ. ಭಕ್ತಿ, ನೀತಿ, ಶುದ್ಧ ಜೀವನ ಮೌಲ್ಯಗಳನ್ನು ಕುರಿತು ಸಮಾಜಕ್ಕೆ ತಮ್ಮ ಕೀರ್ತನೆಗಳ ಮೂಲಕ ಹೇಳ ಹೊರಟ ಹರಿದಾಸರು ಶುದ್ಧ ವೈದಿಕ ಪರಂಪರೆಯ ತತ್ವ ನೀತಿಗಳನ್ನೇ ಭಕ್ತಿನೆಲೆಯಲ್ಲಿ ಮರುಸೃಷ್ಟಿಸಿ ಸರಳವಾಗಿ ಮರುಬೋಧಿಸಿದರು. ವೈದಿಕ ಮತದ ವೇದಗಳು ಧರ್ಮಶಾಸ್ತ್ರಗಳ ವಿಧಿನಿಯಮಗಳ ಮೂಲತತ್ವಗಳೇ ನವೀನ ನಮೂನೆಯಲ್ಲಿ ಸಮಾಜ ಸುಧಾರಣೆ ರೂಪದಲ್ಲಿ ಜೀವನ ಮೌಲ್ಯಗಳಾಗಿ ಹಾಗೂ ನೀತಿ ತತ್ವಗಳಾದ ಕಾರಣ ಮಹಿಳೆಯರ ಜೀವನದಲ್ಲಿ ಹೇಳಿಕೊಳ್ಳುವಂತಹ ಬದಲಾವಣೆ ಕಾಣಲಿಲ್ಲ.

ಈ ಪಂಥದ ದಾಸ ಸಾಹಿತ್ಯವು ಹೋರಾಟದ ಹಿನ್ನೆಲೆಯಿಲ್ಲದ, ವೇದಗಳು, ಉಪನಿಷತ್ತು, ಭಾಗವತ, ಶಾಸ್ತ್ರ, ಪುರಾಣ ಮುಂತಾದವುಗಳಲ್ಲಿರುವ ವೈದಿಕ ತತ್ವಗಳನ್ನು ಜನಸಾಮಾನ್ಯರಿಗೆ ಸರಳವಾಗಿ ಮುಟ್ಟಿಸುವ ಮೂಲಕ ಸಮಾಜದಲ್ಲಿ ಬದಲಾವಣೆ ತರುವ ಪ್ರಧಾನ ಕಾಳಜಿ ಹೊಂದಿತ್ತು. ದಾಸರು ಹೇಳಲು ಹೊರಟದ್ದು ವಿಚಾರಗಳ ಸಂಪೂರ್ಣತೆ ವೈದಿಕ ತತ್ವ ಚಿಂತನೆಯ ಪುರುಷ ಪ್ರಧಾನ ಗ್ರಹಿಕೆಯಲ್ಲಿ ಸಾಗಿತ್ತು. ಅದರಂತೆ ಮಹಿಳೆ ಮಾಯೆಯಾಗಿ ಸಂಸಾರದ ಮೋಹಕ್ಕೊಳಪಡಿಸುವ ರೂಪದಲ್ಲಿ ಕಂಡಿದ್ದಾಳೆ. ಸಂಸಾರದ ಹಂಗು ತೊರೆಯುವ ಮುಖ್ಯ ಧ್ಯೇಯ ದಾಸರದು. ಹೆಣ್ಣೆಂಬ ಮಾಯೆಯಿಂದ ಹೊರಬಂದು ಹರಿಯ ದಾಸ್ಯದ ಚೌಕಟ್ಟಿನಲ್ಲಿ ವ್ಯವಹರಿಸುವ ದಾಸರಿಗೆ ಸಾಮಾಜಿಕ ಸುಧಾರಣೆಗಿಂತ ಹರಿಭಕ್ತಿ ಹಾಗೂ ಆತ್ಮ ಶೋಧನೆ ಮುಖ್ಯ ಆಸಕ್ತಿಯಾಗಿತ್ತು. ಸಹಾನುಭೂತಿ ಸ್ವರೂಪದಲ್ಲಿದ್ದ ಮಹಿಳಾಪರ ಕಾಳಜಿಗಳು ಭಾಗವತರ ಅಭಿವ್ಯಕ್ತಿಗಳಾಗಿವೆ. ಪ್ರಧಾನ ನೆಲೆಯಲ್ಲಿ ಮಹಿಳಾಪರ ವಿಚಾರಗಳು ಸನಾತನ ಧರ್ಮ ಸುಧಾರಣೆಯಾಗಿ ಸಾಗಿದವು. ಈ ಪಂಥದ ಪ್ರಭಾವ ೧೯ನೇ ಶತಮಾನದವರೆಗೂ ಕೀರ್ತನೆಗಳು ಹಾಗೂ ಕಾವ್ಯಗಳ ಮೂಲಕ ಮುಂದುವರೆದಿದೆ. ಇನ್ನು ಈ ಭಾಗವತ ಪರಂರಪೆಯ ಪುರುಷ ಪ್ರಧಾನ ಚಿಂತನಾ ಕ್ರಮದಲ್ಲಿ ಮಹಿಳೆಯರೂ ಕೂಡ ಕೀರ್ತನೆ ಹಾಗೂ ಕಾವ್ಯಗಳನ್ನು ರಚನೆ ಮಾಡಿದ್ದಾರೆ.

ವೈದಿಕ ಪರಂಪರೆಯಲ್ಲಿ ಮಹಿಳೆಯರು ಭಾಗವತ ಸಂಪ್ರದಾಯದ ಪ್ರಧಾನ ಧೋರಣೆಯಲ್ಲಿ ಕೀರ್ತನೆಗಳು ಹಾಗೂ ಕಾವ್ಯಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಬಗೆಯ 'ಹದಿಬದೆಯ ಧರ್ಮ' ಕೃತಿ ಕೊಟ್ಟ ಸಂಚಿ ಹೊನ್ನಮ್ಮನಿಗೆ ಈ ಪರಂಪರೆಯಲ್ಲಿ ಪ್ರಮುಖ ಸ್ಥಾನವಿದೆ. ೧೯ನೇ ಶತಮಾದವೆರೆಗೂ ಮುಂದುವರೆದ ಈ ಕಾಲಘಟ್ಟದಲ್ಲಿ ಬರುವ ಹೆಳವನಕಟ್ಟೆ ಗಿರಿಯಮ್ಮ, ಗಲಗಲಿಯ ಅವ್ವ, ಭಾಗ್ಯಮ್ಮ, ಸುಂದರಬಾಯಿ, ಹರಪನಹಳ್ಳಿ ಭೀಮವ್ವ, ಶೃಂಗಾರಮ್ಮ, ರಾಣಿ ಚೆಲುವಾಂಬೆ, ಚೆಲ್ಲಮ್ಮ, ಸುಂದರಾಬಾಯಿ, ಪನ್ನಿ ಲಕ್ಷ್ಮೀ ಬಾಯಿ ನಾಡಘರ ಶಾಂತಿಬಾಯಿ, ಓರಬಾಯಿ ಲಕ್ಷ್ಮಿದೇವಮ್ಮ, ಅಂಬಾಬಾಯಿ, ರಾಧಾಬಾಯಿ, ಸರಸಾಬಾಯಿ, ಕಳಸದ ಸುಂದರಮ್ಮ, ಗುಂಡಮ್ಮ, ಜೀವೂಬಾಯಿ ಮೊದಲಾದವರು ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಘಟನೆಗಳನ್ನೊಳಗೊಂಡ ಪುಟ್ಟ ಕಾವ್ಯ ಕಥನಗಳನ್ನು ರಚಿಸಿದ್ದಾರೆ. ಕೀರ್ತನೆಗಳಲ್ಲಿ ಹರಿದಾಸರ ಲೋಕಾನುಭವದ ಪ್ರಭಾವದಂತೆ ಯತಾವತ್ತಾಗಿ ಮಹಿಳಾ ರಚನೆಗಳಲ್ಲೂ ಶಾಸ್ತ್ರ ಸಂಪ್ರದಾಯ, ಆಚಾರವಿಚಾರಗಳು ಜೀವಂತವಾಗಿ ಕಂಡುಬಂದಿವೆ. ಇವರ ಸಾಹಿತ್ಯದ ಮುಖ್ಯ ಲಕ್ಷಣಗಳಲ್ಲಿ ಹೆಣ್ಣು ಮಕ್ಕಳು ಆಚರಿಸುವ ವ್ರತ ಪೂಜೆಗಳು, ಹಬ್ಬ, ಹುಣ್ಣಿಮೆ, ಮದುವೆ, ಅಡುಗೆ ವಿಚಾರಗಳು, ಒಡವೆ ವಸ್ತ್ರಗಳು ಬದುಕಿನ ರೀತಿ-ನೀತಿಗಳು ಇವರ ವಿವೇಚನೆಯಲ್ಲಿ ಹಾಡಲು ಸುಲಭವಾದ ಶೈಲಿಯಲ್ಲಿ ಕೀರ್ತನೆ, ಹಾಡು ಹಾಗೂ ಕಾವ್ಯದ ವರ್ಣನೆಗಳಲ್ಲಿ ಜೀವನಾನುಭವದ ಮೌಲ್ಯಗಳಾಗಿ ಪರಂಪರೆಯ ಸಾಂಸ್ಕೃತಿಕ ನಿದರ್ಶನಗಳಂತೆ ದಾಖಲಾಗಿವೆ.

ಪುರುಷಸತ್ತೆಯ ಮೌಲ್ಯಗಳ ನೆರಳಲ್ಲಿ ಸಾಗುವ ಇವರು ವಚನಕಾರ್ತಿಯರು ತೋರಿದ ಖಚಿತೆಯಾಗಲಿ ಹಾಗೂ ದಿಟ್ಟತನವಾಗಲಿ ಮಹಿಳಾಪರ ನೆಲೆಯಲ್ಲಿ ತೋರಲಿಲ್ಲ. ಬದುಕಿನ ವ್ಯಂಗವೆಂಬಂತೆ ಈ ಭಾಗವತ ಪರಂಪರೆಯಲ್ಲಿನ ಭಾಗಶಃ ಮಹಿಳೆಯರ ಬದುಕಿನ ವಾಸ್ತವ ಚಿತ್ರಣದಲ್ಲಿ ಪುರುಷ ನಿರ್ಮಿತ ವಿಧಿನಿಯಮಗಳ ನರಕ ಸುಳಿಯಲ್ಲಿ ನಲುಗಿದವರೇ ಹೆಚ್ಚು. ಇದರಿಂದ ಹೊರ ಬರಲು ಆರಿಸಿಕೊಂಡಿದ್ದು ಮಾತ್ರ ಭಕ್ತಿ. ಧಾರ್ಮಿಕ ಭಕ್ತಿ ಹಾಗೂ ಸಂಪ್ರದಾಯಗಳಲ್ಲಿಯೇ ಮೈಮರೆತು ಪ್ರವಹಿಸುವ ಇವರ ವಿಚಾರಗಳಲ್ಲಿ ಸ್ವಂತದ ಬಗ್ಗೆ ಪ್ರಶ್ನೆಗಳು ಮೂಡಲೇ ಇಲ್ಲ. ರೂಪಗೆಟ್ಟ ಕ್ರೂರ ಸಮಾಜ ವ್ಯವಸ್ಥೆಯ ವಿಧಿ ಸಂಪ್ರಾಯಗಳ ದುರಂತದಲ್ಲಿ ನರಳಿದ ಮಹಿಳೆಯರು ತಮ್ಮ ನೋವನ್ನು ಮರೆಯಲು, ಬದುಕಿನ ವ್ಯಂಗ್ಯದಿಂದ ಹೊರಬರಲು ಭಕ್ತಿ ಹಾದಿಯಲ್ಲಿ ನಡೆದರು. ಅಂತಹ ಕೆಲವರನ್ನು ನೋಡುವುದಾದರೆ,

- ಶ್ರೀ ರಾಮೇಶ್ವರ, ರಮಿ ಅರಸ ಎಂಬ ಅಂಕಿತದಿಂದ ಇನ್ನೂರ ಅರವತ್ತಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿರುವ ಗಲಗಲಿಯ ಅವ್ವ ಹನ್ನೆರಡು ವರ್ಷದ ಬಾಲೆಯಾಗಿದ್ದಾಲೇ ತೊಂಭತ್ತೈದು ವರ್ಷದ ಮುದುಕನನ್ನು ಮದುವೆಯಾಗಿ ಕೇವಲ ಎಂಟು ದಿನಗಳ ವಿವಾಹ ಜೀವನ ನಡೆಸಿ ಬಾಲವಿಧವೆಯಾಗಿ ತನ್ನ ಜೀವನ ಸವೆಸಿದಳು.
- ಹೆಳವನಕಟ್ಟೆ ಗಿರಿಯಮ್ಮ ದಾಂಪತ್ಯ ಜೀವನದಿಂದ ಹೊರ ಬಂದು ಜೀವನಮಾನ ವಿರಾಗಿಣಿಯಾಗಿ ಉಳಿದಳು.
- ಭೀಮೇಶ್ವರ ಅಂಕತದಿಂದ ನೂರ ನಲವತೊಂಭತ್ತಕ್ಕೂ ಹೆಚ್ಚು ಹಾಡುಗಳನ್ನು ರಚಿಸಿದ ೧೯ನೇ ಶತಮಾನದ ಹರಪನಹಳ್ಳಿ ಭೀಮವ್ವ ಹನ್ನೊಂದನೆ ವಯಸ್ಸಿನಲ್ಲಿ ಮೂರನೇ ಹೆಂಡತಿಯಾಗಿ ನಲವತ್ತೈದು ವರ್ಷದ ವ್ಯಕ್ತಿಯೊಂದಿಗೆ ಮದುವೆಯಾಗಿದ್ದಾಳೆ.
- ಶ್ರೀ ವೆಂಕಟೇಶ್ವರ, ಬೆಟ್ಟದೊಡೆಯ ಶ್ರೀ ವೆಂಕಟೇಶ್ವರ ಅಂಕಿತದಿಂದ ಹಾಡುಗಳನ್ನು ಕೃಷ್ಣನ ಹುಟ್ಟು, ರುಕ್ಮಾಂಗದ ಚರಿತ್ರೆ, ಸುಭದ್ರಾಮುಯ್ಯಿ, ಸುಭದ್ರಾ ಕಲ್ಯಾಣ, ರುಕ್ಮಿಣೀ ಪರಿಣಯ ಕೃತಿಗಳನ್ನು ಬರೆದು ಬಾಲವಿಧವೆಯಾಗಿ ಹರಿದಾಸ ಭಕ್ತೆಯಾಗಿ ತನ್ನ ಬದುಕನ್ನು ಸವೆಸಿದಳು.
- ಸರಳ ಭಾಷೆಯಲ್ಲಿ ಕೀರ್ತನೆಗಳನ್ನು ರಚಿಸಿರುವ ಪನ್ನಿ ಲಕ್ಷ್ಮೀಬಾಯಿ ಬಾಲವಿಧವೆಯಾಗಿ ನಲವತ್ತೆರಡನೇ ವಯಸ್ಸಿನಲ್ಲಿ ತೀರಿಕೊಂಡಳು.
- ಮೂವತ್ತು ವರ್ಷಕ್ಕೆ ವಿಧವೆಯಾಗಿ ತನ್ನ ಕಣ್ಮುಂದೆಯೇ ಮಗಳು ವಿಧವೆಯಾದ ಕಾರಣ ನಿರಾಶೆಯಿಂದ ಭಕ್ತಿಮಾರ್ಗ ಹಿಡಿದ ನಾಡಘರ ಶಾಂತಾಬಾಯಿ ಶಾಂತಿಪಾಲಿಪ ಗುರು ಅಂಕಿತದಿಂದ ಇಪ್ಪತ್ತೇಳಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದ್ದಾಳೆ.
- ಐದನೇ ವಯಸ್ಸಿನಲ್ಲಿ ಬಾಲ್ಯವಿವಾವವಾದ ಓರೆಬಾಯಿ ಲಕ್ಷ್ಮೀದೇವಮ್ಮ ನರಸಿಂಹವಿಠಲ ಅಂಕಿತದಿಂದ ಭಕ್ತಿರ ಚರಿತ್ರೆ ಹಾಡುಗಳನ್ನು ಏಳಕ್ಕೂ ಹೆಚ್ಚು ಕಥೆಗಳನ್ನು ಬರೆದು ನಡುವಯಸ್ಸಿನಲ್ಲಿ ವಿಧವೆಯಾದಳು.
- ಮೂರನೇ ಹೆಂಡತಿಯಾಗಿ ನಡುವಯಸ್ಸಿನಲ್ಲಿ ವಿಧವೆಯಾದ ಸರಸಾಬಾಯಿ ರಮಾವಲ್ಲಭ ವಿಠಲ ಅಂಕಿತದಿಂದ ಕೀರ್ತನೆಗಳನ್ನು ರಚಿಸಿದ್ದಾರೆ.
- ಹತ್ತನೇ ವಯಸ್ಸಿನಲ್ಲಿ ಬಾಲ್ಯವಿವಾಹವಾಗಿ ಹನ್ನೊಂದನೆ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು ಬಾಲವಿಧವೆಯಾದ ಜೀವೂಬಾಯಿ ಉಗ್ರಾದಿ ವಿಠಲ, ಕಮಲನಾಭ ವಿಠಲ ಅಂಕತಗಳಂದ ನೂರ ಎಂಭತ್ತು ಕೀರ್ತನೆಗಳನ್ನು ರಚಿಸಿದ್ದಾರೆ.

ಈ ಕಾಲದ ಮಹಿಳಾ ಜೀವನ ಹಾಗೂ ರಚನೆಗಳಲ್ಲಿ ಕಾಣುವ ಪ್ರಮುಖ ಲಕ್ಷಣಗಳಿವು,

೧. ಈ ಘಟ್ಟದ ಮಹಿಳಾ ಸಾಹಿತಿಗಳು ಶಿಕ್ಷಣ ಕೇಂದ್ರಗಳಲ್ಲಿ ಕ್ರಮಬದ್ಧ ಶಿಕ್ಷಣ ಪಡೆದವರಲ್ಲ. ಕೆಲವರು ಮನೆಯಲ್ಲೇ ಕನ್ನಡ ಸಂಸ್ಕೃತ ಭಾಷೆಗಳನ್ನೂ ಪುರಾಣ ಶಾಸ್ತ್ರಾದಿಗಳನ್ನು ಅಭ್ಯಾಸ ಮಾಡದವರು. ಇನ್ನು ಕೆಲವರು ಓದು-ಬರಹ ಅರಿಯದವರು.

೨. ಇಲ್ಲಿನ ಬಹಳಷ್ಟು ಮಂದಿ ಬಾಲ್ಯವಿವಾಹ, ಬಾಲವಿಧವೆ, ಬಹುಪತ್ನಿತ್ವ ಆ ಕಾಲದ ಸಾಮಾಜಿಕ ಶೋಷಣೆಗೆ ಗುರಿಯಾದವರು. ಇನ್ನು ಕೆಲವರು ಸ್ವಂತ ಸಂಸಾರ ಮನೆ ಮಕ್ಕಳ ಜವಧ್ದಾರಿ ಹಾಗೂ ಅವಲಂಬನೆಗಳಿಲ್ಲದೆ ಹರಿಭಕ್ತಿಯನ್ನೇ ಆಶ್ರಯಿಸಿ ಇತರರಿಗಾಗಿ ಬಾಳಿದವರು.

೩. ಇಲ್ಲಿ ಎಲ್ಲರೂ ವೈಷ್ಣವ ಪುರಾಣವಸ್ತುಗಳ ಮುಖ್ಯವಾಗಿಟ್ಟುಕೊಂಡು ಕಾವ್ಯ ರಚನೆ ಮಾಡಿದ್ದಾರೆ.

೪. ಲೌಕಿಕ ಸಂಸಾರದ ಪರಿಸರದಲ್ಲಿ ನಡೆಯುವ ಘಟನೆಗಳನ್ನು ದೇವತೆಗಳ ನಡುವಣ ವಿಚಾರವೆಂಬಂತೆ ಕಲ್ಪಿಸಿ ಹಾಡಿ ತಮ್ಮ ಕೃತಿಗಳಿಗೆ ಭಕ್ತಿಯ ಆಭರಣವನ್ನು, ಅಲೌಕಿಕ ಚೌಕಟ್ಟನ್ನು ನೀಡಿದ್ದಾರೆ. ಈ ಮೂಲಕ ದೇವತೆಗಳನ್ನು ನಮ್ಮ ನಡುವೆ ತಂದು ಆತ್ಮೀಯವಾಗಿಸಿದ್ದಾರೆ. ಬಹುಶಃ ಹುದುಗಿಸಿಟ್ಟ ಅವರ ಆಸೆ ಆಕಾಂಕ್ಷೆಗಳು ಕಂಡುಕೊಂಡ ಅಭಿವ್ಯಕ್ತಿ ಎಂದೆನಿಸುತ್ತದೆ.

೫. ಕೆಲವರಲ್ಲಿ ಹರಿದಾಸರಂತೆ ನೈಚ್ಯಾನುಸಂಧಾನ ಹೆಚ್ಚಾಗಿ ಕಂಡು ಬಂದಿಲ್ಲ.

೬. ಶಾಸ್ತ್ರ-ಸಂಪ್ರದಾಯಗಳ ಸೂಕ್ಷ್ಮಾತಿಸೂಕ್ಷ್ಮ ವರ್ಣನೆಗಳು ಹಾಸ್ಯದ ಲೇಪನ, ಮಾನವನ ಮೂಲಭೂತ ಸ್ವಭಾವಗಳ ಅನಾವರಣ, ಆಡುಮಾತಿನ ಬಳಕೆ, ಗಾದೆಗಳ ಸೇರ್ಪಡೆ-ಇವು ಎಲ್ಲರ ರಚನೆಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣವಾಗಿದೆ.

೭. ಸಂಪ್ರದಾಯದ ಹಾಡಿನ ರೀತಿಯ ರಚನೆಗಳು ಹೆಚ್ಚು, ಸಂಸಾರಿಕ ವಲಯವು ಅವುಗಳ ಕೇಂದ್ರ. ಅಲ್ಲಲ್ಲಿ ರಾಗ-ದ್ವೇಷಗಳು, ಬಂಧುತ್ವ-ಬಂಧುರತೆ, ವಾಗ್ವಾದಗಳು, ನಿಂದೆ-ಅಣುಕಗಳು ಇವು ಹಾಡುಗಳಲ್ಲಿ ವಿಜೃಂಭಿಸಿವೆ. ಒಟ್ಟಾರೆ ಹಾಡುಗಳು ಸ್ವಂತ ಬದುಕಿನಲ್ಲಿ ಪರಿಚವಿದ್ದ ಪರಿಸರವನ್ನು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ.

೮. ಹಾಡು ಕಾವ್ಯಗಳಲ್ಲಿ ಶಾಸ್ತ್ರ ಸಂಪ್ರದಾಯಗಳು (ಮುಖ್ಯವಾಗಿ ಬ್ರಾಹ್ಮಣ ಸಮುದಾಯದ) ದಾಖಲೆಗಳಾಗಿವೆ. ಆಗತಾನೇ ಹುಟ್ಟಿದ ಮಗು, ಬಾಲೆ, ಶೋಡಶಿ, ಬಸರಿ ಹೆಂಗಸರ ಬಯಕೆಗಳು, ಬಾಣಂತಿಯ ಉಪಚಾರಗಳು ಎಲ್ಲವೂ ಇಲ್ಲಿ ನಮೂದಾಗಿವೆ. ಆದರೆ ಇವುಗಳಲ್ಲಿ ದೇವಾನುದೇವತೆಗಳ ಸಂದರ್ಭ ಕಲ್ಪಿಸಿ ಹೇಳಿರುವುದರಿಂದ ಅವು ಭಕ್ತಿ ಸಾಹಿತ್ಯ ವಲಯಕ್ಕೆ ಸೇರಿಹೋಗುತ್ತವೆ. ಇದು ಅವರು ತಮ್ಮ ಭಾವಾನುಭವ ಅಭಿವ್ಯಕ್ತಿಗೆ ಕಂಡುಕೊಂಡ ತಂತ್ರವೂ ಆಗಿದೆ.

೯. ಇಲ್ಲಿನ ವೈಷ್ಣವ ಕವಯತ್ರಿಯರೂ ಆ ಕಾಲದ ಅಡುಗೆ ಊಟ ತಿಂಡಿಗಳು, ಒಡವೆ-ವಸ್ತ್ರಗಳು ರೂಢಿ-ಸಂಪ್ರದಾಯಗಳು, ಆಚಾರ-ವಿಚಾರಗಳು ಎಲ್ಲವುಗಳ ಸೂಕ್ಷ್ಮಾತಿಸೂಕ್ಮ ನಿರೂಪಣೆ, ವರ್ಣನೆಗಳನ್ನು ಕೊಡುವ ಮೂಲಕ ತಮ್ಮತಮ್ಮ ಕಾಲ ಪರಿಸರದ ಸಂಸ್ಕೃತಿಯನ್ನು ಪದರ ಪದರವಾಗಿ ನಮೂದಿಸಿದ್ದಾರೆ. ಈ ವಿಚಾರದಲ್ಲಿ ಹರಿದಾಸರಿಂದ ಪ್ರತ್ಯೇಕವಾಗುತ್ತಾರೆ.

೧೦. ವೈಧವ್ಯದ ಬೇಗುದಿಯಿಂದ ಹೊರ ಬಂದು ಅದರಿಂದ ತಮ್ಮನ್ನು ನಿವಾರಿಸಿಕೊಳ್ಳುವ ಪರೋಕ್ಷ ಕ್ರಿಯೆಯಾಗಿ ಅವರ ಅಭಿವ್ಯಕ್ತಿ ವ್ಯಾಪ್ತಿಯಲ್ಲಿ ತಮ್ಮ ಆ ನೋವಿನ ಅನುಭವ ಮಾತ್ರ ಮಿಡಿಯಲಿಲ್ಲ ಎನ್ನುವುದೆ ನೋವಿನ ಸಂಗತಿ.[೧]

ಪುರುಷ ಹಾಗೂ ಪುರುಷ ಕೇಂದ್ರಿತ ದೃಷ್ಟಿಕೋನಗಳೇ ವ್ಯಾಪಕವಾಗಿ ಆವರಿಸಿರುವ ಸಮಾಜ-ಪರಂಪರೆಯೊಂದರಲ್ಲಿ ಮಹಿಳೆಯ ಅನನ್ಯತೆ ಸಂಪ್ರದಾಯ ನೆಲೆ ಎನ್ನುವುದೇ ಆದರ್ಶ ಮೌಲ್ಯವಾಗುತ್ತದೆ. ಮಹಿಳೆ ಅದರೊಳಗೆ ತನ್ನನ್ನು ತಾನು ನೋಡಿಕೊಂಡಾಗ ಸಂಪೂರ್ಣ ತಾನಿರುವ ಸ್ಥಿತಿ, ಅವಳ ದೌರ್ಬಲ್ಯಗಳು, ಮಿತಿಗಳೇ ಕಾಣುತ್ತವೆ. ಆದರೆ ಒಟ್ಟು ಸಮಾಜದ ಹಿನ್ನೆಲೆ, ಸಂದರ್ಭಗಳ ಮೂಲಕ ಗ್ರಹಿಸಿದಾಗ ಪ್ರತಿಯೊಬ್ಬ ವ್ಯಕ್ತಿಯೂ ಆ ಸಮಾಜದ ಒಂದಿಲ್ಲಲೊಂದು ರೀತಿಯಲ್ಲಿ ಆದರ್ಶ ಕಲ್ಪನೆಯ ಆವರ್ತದಲ್ಲಿ ಒಂದಾಗಿರುತ್ತಾನೆ. ಪ್ರತಿಪಾದನೆಯಲ್ಲಿಯೂ ಇಂತಹದೇ ಬದುಕಿನ ದರ್ಶನವನ್ನು ಕಾಣುತ್ತಾರೆ. ಇದೇ, ಆ ಸಮಾಜದ ಪ್ರಜ್ಞಾವಂತಿಕೆಯ ಅಭಿವ್ಯಕ್ತಿ ಕ್ಷೇತ್ರದಲ್ಲಿನ ನಡಾವಳಿಯ ಒಂದು ನೈತಿಕ ಅನನ್ಯತೆಯ ಪ್ರತಿಫಲವಾಗಿರುತ್ತದೆ. ಈ ನಿಟ್ಟಿನಲ್ಲಿ ಹೊನ್ನಮ್ಮನ ವಿಚಾರಗಳೂ ಅಭಿವ್ಯಕ್ತಿ ಪಡೆದಿದೆ. ಅದೇ, ಸ್ತ್ರೀ-ಪುರುಷರ ಸಮಾನ ನೆಲೆಯ ಅಭಿವ್ಯಕ್ತಿಗಳಾಗಿದ್ದರೆ ಸಮಾಜದ ನೈತಿಕ ಆದರ್ಶಗಳಾಗಿ ಸರ್ವಕಾಲೀಕವಾಗುತ್ತಿದ್ದವು.

ಈ ನಿಟ್ಟಿನಲ್ಲಿ ಯಾವುದೇ ಪರಂಪರೆಯಿರಲಿ ಸಮಾನ ನೆಲೆಯಲ್ಲಿ ಸ್ತ್ರೀ ಮತ್ತು ಪುರುಷ ಅಭಿವ್ಯಕ್ತಿಗಳು ಮೂಡಿದಾಗ ಒಂದು ಆರೋಗ್ಯಪೂರ್ಣ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ. ವಚನ ಪರಂಪರೆ ಗಮನಿಸಿ ಹೇಳುವುದಾದರೆ, ಮಹಿಳೆಯರು ಸಮುದಾಯವಾಗಿ ಎಲ್ಲಾ ವರ್ಗ ಜಾತಿಭೇದಗಳಿಲ್ಲದೆ ಒಟ್ಟಿಗೆ ಒಂದೇ ವೇದಿಕೆಯೊಂದಿಗೆ ಸೇರಿಕೊಂಡಾಗ ಸ್ತ್ರೀ ಕುಲದ ಅಭಿವ್ಯಕ್ತಿಯಲ್ಲಿ ನಿಖರತೆ ಹಾಗೂ ಸಮಗ್ರತೆ ಹೊರಗೆಡವಲು ಸಾಧ್ಯವಾಗುತ್ತದೆ ಎಂಬುದು ತಿಳಿಯುತ್ತದೆ.

## ಆಧಾರ ಗ್ರಂಥ

**೧. ಶ್ರೀಮತಿ ಆರ್ಯಾಂಬ ಪಟ್ಟಾಭಿ (ಸಂ), ಮಹಿಳಾ ಸಾಹಿತ್ಯ ಸಮೀಕ್ಷೆ, ಪುಟ-೧೨೪,೧೨೫.**